ಅಂಬೇಡ್ಕರ್ ಅಸ್ಪೃಶ್ಯತೆಯನ್ನು ಎಲ್ಲಾ ಆಯಾಮಗಳಲ್ಲಿ ಪರಿಶೀಲಿಸುತ್ತಾರೆ. ಭೌತಿಕವಾಗಿ ಶುದ್ಧ–ಅಶುದ್ಧ ಎನ್ನುವ ವಾದದಲ್ಲಿ ಒಂದು ಜನಾಂಗಕ್ಕೆ ಸೇರಿದವರನ್ನು ಅವರ ನೆರಳೂ ಬೀಳದಂತೆ ದೂರವಿಟ್ಟಿರಬೇಕು ಎನ್ನುವುದು ಒಂದು ಆಯಾಮ. ಇದು ಭಾರತೀಯ ಸಂಸ್ಕೃತಿಗೇ ವಿಶೇಷವಾಗಿ ಸಲ್ಲುವ ಮಾತು, ಮತ್ತ್ಯಾವುದೇ ಸಂಸ್ಕೃತಿಯಲ್ಲಿ – ಜಾತಿ, ಕಾಯಕ, ಆಹಾರ ಪದ್ಧತಿ – ಈ ರೀತಿಯ ಘೋರ ವರ್ಗೀಕರಣ ಆಗಿಲ್ಲವೆಂದು ಅವರು ವಾದಿಸುತ್ತಾರೆ. ಈ ಪುಸ್ತಕದಲ್ಲಿರುವ ವಾದವನ್ನು ಗಮನಿಸುತ್ತಿರುವ ಕಾಲಕ್ಕೇ ಇಸಾಬೆಲ್ ವಿಲ್ಕರ್ಸನ್ ಬರೆದ 'ಕಾಸ್ಟ್' (ಜಾತಿವ್ಯವಸ್ಥೆ) ಎನ್ನುವ ಪುಸ್ತಕವನ್ನೂ ಸಮಾನಾಂತರವಾಗಿ ಅಧ್ಯಯನ ಮಾಡಿದೆ. ಅಸ್ಪೃಶ್ಯತೆ ಮತ್ತು ಆಹಾರ ಪದ್ಧತಿಯ ಮೇಲಿನ ವರ್ಗೀಕರಣವನ್ನು ಚಾರಿತ್ರಿಕ ನೆಲೆಯಲ್ಲಿ ಅಂಬೇಡ್ಕರ್ ಕಂಡರೆ, ವಿಲ್ಕರ್ಸನ್ ಇದನ್ನು ಭಿನ್ನ ಮತ್ತು ವಿಸ್ತೃತ ನೆಲೆಯಲ್ಲಿ ಪರಿಶೀಲಿಸುತ್ತಾರೆ. ಅಸ್ಪೃಶ್ಯತೆಯನ್ನು ಭೌತಿಕವಾಗಿ ಮುಟ್ಟದಿರುವುದು ಎಂಬಷ್ಟಕ್ಕೆ ಸೀಮಿತಗೊಳಿಸದೆ ಬೇರೆಯದೇ ಆಯಾಮದಲ್ಲಿ ನೋಡಲು ಆಕೆ ಪ್ರಯತ್ನಿಸುತ್ತಾರೆ. ಭಾರತದಲ್ಲಿ ಜಾತಿವ್ಯವಸ್ಥೆಯೆಂದೂ ವಿಶ್ವದ ಇತರ ಜಾಗಗಳಲ್ಲಿ ವರ್ಣವ್ಯವಸ್ಥೆಯೆಂದು ಭಿನ್ನವಾಗಿ ಪರಿಭಾಷಿಸುವುದಕ್ಕಿಂತ, ಜಾತಿಯ ಚೌಕಟ್ಟಿನಲ್ಲೇ ಪರಿಭಾಷಿಸುವುದು ಸೂಕ್ತವೆಂದು ಆಕೆ ವಾದಿಸುತ್ತಾರೆ. ಆಕೆ ಇದನ್ನು ಎಂಟು ಸ್ತಂಭಗಳ ನಿರ್ಮಿತಿಯನ್ನಾಗಿ ಕಾಣುತ್ತಾರೆ.

ಮೊದಲ ಸ್ತಂಭ – ದೈವೇಚ್ಛೆ ಮತ್ತು ನೈಸರ್ಗಿಕ ನಿಯಮಾವಳಿ – ಸೃಷ್ಟಿಯ ನಿಯಮವೇ ಈ ರೀತಿಯಾಗಿದೆ ಎಂದು ದೇವರ ಏಜೆಂಟರು ವ್ಯಾಖ್ಯಾನಿಸುವುದು. ಎರಡನೆಯ ಸ್ತಂಭ ಆನುವಂಶಿಕವಾದ – ಇದು ಹೀಗೇ ತಲತಲಾಂತರಗಳಿಂದ ಬಳುವಳಿಯಾಗಿ ಬಂದಿರುವ ವ್ಯವಸ್ಥೆ ಎನ್ನುವುದು. ಮೂರನೆಯ ಸ್ತಂಭ – ಮದುವೆ ಮತ್ತು ಮೈಥುನಕ್ಕೆ ಸಂಬಂಧಿಸಿದ್ದು – ಇಲ್ಲಿ ಯಾರೊಂದಿಗೆ ಸಹಜೀವನ ಮಾಡಬಹುದು ಎನ್ನುವ ಗಟ್ಟಿ ನಿಯಮಾವಳಿಯಿದ್ದರೂ, ಮೈಥುನಕ್ಕಿರುವ ನಿಯಮಾವಳಿಗಳೇ ಭಿನ್ನವೆನ್ನುವುದನ್ನು ನಾವು ಮನಗಾಣಬೇಕು. ನಾಲ್ಕನೆಯ ಸ್ತಂಭ – ಶುದ್ಧ ಮತ್ತು ಮಲಿನ ಎನ್ನುವ ಆಧಾರದ ಮೇಲೆ ಆಗುವ ಭೇದ. ನಮ್ಮಲ್ಲಿ ಊರಬಾವಿಯ ನೀರನ್ನು ಕುಡಿಯುವ ಸವಲತ್ತು ದಲಿತರಿಗೆ ತಲೆತಲಾಂತರದಿಂದ ಇಲ್ಲವಾಗಿದ್ದರೆ, ಅಲ್ಲಿನ ಭೇದ ಕಪ್ಪುಜನರು ಸಾರ್ವಜನಿಕ ಈಜುಕೊಳದಲ್ಲಿ ಈಜುವುದರಿಂದ ಆಗುವ ಮಾಲಿನ್ಯ ಮತ್ತು ತದನಂತರದ ಶುದ್ಧೀಕರಣದ ಮಾತು ಬರುತ್ತದೆ. ನಮ್ಮಲ್ಲಿ ಮಂದಿರಗಳಲ್ಲಿ ದಲಿತರ ಪ್ರವೇಶ ನಿಷಿದ್ಧವಾಗಿದ್ದರೆ, ಅಲ್ಲಿ ಸಾಮಾಜಿಕವಾಗಿ ಕೆಲ ಜಾಗಗಳಲ್ಲಿ ಕಪ್ಪುಜನರ ನಿಷೇಧವಿತ್ತು. ಇಲ್ಲಿ ವಿಲ್ಕರ್ಸನ್ ಒಂದು ಗಮ್ಮತ್ತಿನ ವಾದವನ್ನು ಮಂಡಿಸುತ್ತಾರೆ. ನಿಷಿದ್ಧವಾದದ್ದನ್ನು ಹಕ್ಕೊತ್ತಾಯದಿಂದ ದಕ್ಕಿಸಿಕೊಳ್ಳುವ ಪ್ರಕ್ರಿಯೆ (ಉದಾಹರಣೆಗೆ, ಮಂದಿರ ಪ್ರವೇಶ) ಒಂದು ರೀತಿಯಲ್ಲಿ ದಲಿತರೂ ಸವರ್ಣೀಯರ ನಿಯಮಾವಳಿಗೆ ಒಡ್ಡಿಕೊಳ್ಳುವ ಪ್ರಕ್ರಿಯೆಯೇ. ಆ ಹಕ್ಕನ್ನು ಪಡೆಯಬೇಕೆಂದು ಹಳಹಳಿಸುವುದರಲ್ಲಿಯೇ ಅದು ಉತ್ತಮ ಎಂದು ಗುರುತಿಸಿದಂತಾಗುತ್ತದೆ.

ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಪುಸ್ತಕದ ಈ ಆವೃತ್ತಿಗೆ ಮುನ್ನುಡಿ ಬರೆದ ಕಂಚ ಅಯಿಲಯ್ಯ ಷೆಪರ್ಡ್ ವಾದಿಸುವ ಗೋಮಾಂಸ ಸೇವನೆಯ ಹಕ್ಕನ್ನು ಕಾಪಾಡಿಕೊಳ್ಳುವುದು ತಮ್ಮ ಸಂಸ್ಕೃತಿಯ ಭಿನ್ನತೆಯನ್ನು ಕಾಪಾಡಿಕೊಳ್ಳಬೇಕೆನ್ನುವ ವಾದದಲ್ಲಿ ಹುರುಳಿದೆ. ಎಂ.ಎನ್. ಶ್ರೀನಿವಾಸ್ ಪ್ರತಿಪಾದಿಸಿದ ಸಂಸ್ಕೃತೀಕರಣವು (ಮತ್ತು ಸಂಸ್ಕೃತೀಕರಣದಿಂದ ಪಾಶ್ಚಾತ್ಯೀಕರಣ) ಒಂದು (ಉತ್ತಮವೆಂದು ಭಾವಿಸಿದ) ಜನಾಂಗದ ಭಿನ್ನತೆಯನ್ನು ಪಡೆಯಬೇಕೆಂಬ ಪ್ರಕ್ರಿಯೆಯಲ್ಲಿಯೇ ಆ ಉತ್ತಮಿಕೆಯನ್ನು ಅನುಸರಿಸಬೇಕೆನ್ನುವ ಆಶಯದಲ್ಲಿ ವ್ಯಕ್ತವಾಗುತ್ತದೆ. ಬ್ರಾಹ್ಮಣರಲ್ಲದ ಇತರ ಹಿಂದೂಗಳು ಗೋಮಾಂಸ ತಿನ್ನುವುದನ್ನು ಬಿಟ್ಟುಕೊಟ್ಟ ಪ್ರಕ್ರಿಯೆಯನ್ನು ಅಂಬೇಡ್ಕರ್ ಈ ನೆಲೆಯಲ್ಲಿಯೇ ನೋಡುತ್ತಾರೆ. ಹಾಗೂ ಸಸ್ಯಾಹಾರದತ್ತ ವಾಲುತ್ತಿರುವುದೂ ಇದೇ ಕಾರಣಕ್ಕಿರಬಹುದು. ಉತ್ತಮಿಕೆಯನ್ನು ಊಟದ ಭಿನ್ನತೆಯಲ್ಲಿ, ವೈಶಿಷ್ಟ್ಯದಲ್ಲಿ ಗ್ರಹಿಸುವ ಪರಿಯನ್ನು ಅಯಿಲಯ್ಯ ನಿರಾಕರಿಸುತ್ತಾರೆ.

ವಿಲ್ಕರ್ಸನ್ ಸೂಚಿಸುವ ಐದನೇ ಸ್ತಂಭ ಕಾಯಕಕ್ಕೆ ಸಂಬಂಧಿಸಿದ್ದು. ನಮ್ಮಲ್ಲಿ ಚಾತುರ್ವರ್ಣ ಪದ್ಧತಿಯಲ್ಲಿ ಕಾಯಕಕ್ಕೆ ಪ್ರಾಮುಖ್ಯತೆ ಕೊಟ್ಟರೂ ಇದು ಎರಡನೇ